ಶ್ರೀಕಂಠಯ್ಯನವರು ಬಹಳ ಶ್ರಮಪಟ್ಟು ಮೂರು ದಿವಸ ಕನ್ನಡನಾಡು ಎಂಬ ಹೆಸರೇಕೆ ಇರಬೇಕೆಂಬುದನ್ನು ವಿವರಿಸಿದ್ದಾರೆ. ಆದರೆ ಈಗಿರುವ ವಾತಾವರಣದಲ್ಲಿ ಹೆಸರನ್ನು ಬದಲಾಯಿಸುವುದು ಸೂಕ್ತವಲ್ಲ. ಅನೇಕರು ಮೈಸೂರು ಎಂಬ ಹೆಸರೇ ಇರಬೇಕೆಂದು ಹೇಳುವವರೂ ಇದ್ದಾರೆ, ಅದೇ ರೀತಿಯಲ್ಲಿ ಕರ್ಣಾಟಕ ಎಂದು ಬದಲಾಯಿಸಬೇಕೆಂದು ಹೇಳುವವರೂ ಇದ್ದಾರೆ. ಕರ್ಣಾಟಕ ಎಂದು ಬದಲಾಯಿಸಬೇಕೆಂದು ಹೇಳುವವರು ಅದಕ್ಕೆ ಹೋರಾಡಬೇಕು, ಹಾಗೆ ಮಾಡಿದರೆ ರಾಜ್ಯವು ವಿಭಾಗವಾಗುವುದಕ್ಕೆ ನಾಂದಿಯಾಗುವುದು. ಈಗ ಮೈಸೂರು ಎಂಬುದಾಗಿ ಹೆಸರಿರುವುದರಿಂದ ಯಾವ ತೊಂದರೆಯೂ ಇಲ್ಲ. ಹೆಸರು ಬದಲಾವಣೆ ಮಾಡಿದಮಾತ್ರಕ್ಕೇ ಆರ್ಥಿಕ ಸಂಪತ್ತು, ಅಥವ ಬೇರೆ ಸೌಖ್ಯ ಒಂದೇ ಸಾರಿ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಮೊದಲು ಹೆಸರನ್ನು ಬದಲಾಯಿಸುವುದಕ್ಕೆ ಮುಂಚೆ ಹಳೆಯ ಮೈಸೂರು ನೌಕರರಿಗಾಗಿರುವ ಅನ್ಯಾಯವನ್ನು ಸರಿಪಡಿಸಿ. ಆದನ್ನೆಲ್ಲಾ ಸರಿಪಡಿಸಿದಮೇಲೆ ಯೋಚನೆಮಾಡೋಣ. ಆಗಲೇ ಹೇಳಿದ ಹಾಗೆ ಈಗ ಆಗಿರುವ ಅನ್ಯಾಯ ಸರಿಪಡಿಸಿ. ಅಲ್ಲಯವರೆಗೆ ಇದರ ಬಗ್ಗೆ ಯಾವ ತೀರ್ಮಾನವನ್ನು ಕೈಗೊಳ್ಳಬಾರದು. ಇದನ್ನು ಒತ್ತಾಯಮಾಡಿ ಆಗಲೇ ಹೇಳಿದ್ದೇನೆ. ಚುನಾವಣಾ ಕಾಲದಲ್ಲಿ ಈ ಪ್ರಶ್ನೆಯಿರಲಿಲ್ಲ. ಇದರ ಬಗ್ಗೆ ಬಹಳ ವಿರೋಧವಿದೆ, ಈಗ ಹೆಸರನ್ನು ಬದಲಾಯಿಸಿದರೆ ಗೊಂದಲಕ್ಕೆ ಕಾರಣವಾಗುವುದು. ಆದುದರಿಂದ ಬದಲಾಯಿಸುವುದಕ್ಕೆ ಹೋಗುವುದು ಸೂಕ್ತವಲ್ಲ. ಹೆಸರು ಬದಲಾವಣೆ ಮಾಡಿದರೆ ಅನಾಹುತವಾಗುತ್ತದೆ, ಆ ರೀತಿ ಮಾಡಕೂಡದು ಎಂದು ಸೂಚನೆಮಾಡಿ ನನ್ನ ವಾತನ್ನು ಮುಗಿಸುತ್ತೇನೆ.

Speaker's Ruling on the amendment of Sri B. P. Gangadhar to the resolution of Sri L. Srikantiah

Sri L. SRIKANTAIAH.—What about the ruling you had promised to give ?

Mr. SPEAKER.—The resolution moved by the hon. member Sri Srikantiah has two parts in it. One part contemplates that there should be a change in the name of the State. According to the first part of his resolution, his suggestion is that the name 'Mysore' should be changed to 'Kannada Nadu'. The amendment proposed by the hon. member Sri Gangadhar and allowed by the Chair also wants a change from the present name of the State. So, on this point there is similarity and there is no conflict.

The point for consideration is whether there will be a subsequent conflict. The hon. Member Sri Gangadhar wants the expression 'Kannada Nadu' to be substituted by 'Karnataka'. It is not a negative thing. Sub-rule (1) of rule 281 says that an amendment shall be relevant to, and within the scope of, the motion to which it is proposed. Now the principle of the resolution is accepted by the amendment of Sri Gangadhar. So, it is quite relevant and is within the scope of the resolution. Sub-rule (2) says that an amendment shall not be moved which has merely the effect of a negative vote. The proposed amendment does not have the effect of a negative vote. It only substituted one part of it. Sub-rule (3) says that an amendment on a question shall not be inconsistent with a previous decision on the same question. There is no decision on this point. Therefore, this sub-rule is also not offended. Therefore after reconsideration of the whole thing, I do not find any reason to revise my opinion. The amendment is perfectly in order.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಕನ್ನಡ ಕುಲಕವಿಗಳಾದ ಮಹಾ ಕಾವ್ಯಋಷಿಗಳಾದ ಕುವೆಂಪುರವರ ಮಾತಿನಲ್ಲಿ ಹೇಳಬೇಕಾದರೆ "ನೀ ಹೆಟ್ಟುವ ನೆಲ ಇದೇ ಕರ್ನಾಟಕ", ಕುವೆಂಪುರವರ ಬಗ್ಗೆ ಇಡೀ ಮೈಸೂರು ದೇಶ—ಹಳೇ ಮೈಸೂರಾಗಲಿ, ಹೈದ್ರಾಬಾದ್ ಕರ್ನಾಟಕವಾಗಲಿ, ಮದ್ರಾಸ್ ಕರ್ನಾಟಕವಾಗಲಿ ಎಲ್ಲ ಕಡೆಯಲ್ಲಿರತಕ್ಕ ಜನಾಭಿಪ್ರಾಯವೂ ಒಂದೇ ಇದೆ. ಅವರಲ್ಲಿ ನಮಗೆ ಭಕ್ತಿ ಇದೆ, ವಾತ್ಸಲ್ಯ ಇದೆ, ಗೌರವ ಇದೆ; ಮತ್ತು ಅವರನ್ನು ಕನ್ನಡ ಕುಲ ಕವಿ ಚಕ್ರವರ್ತಿ ಎಂದು ಒಂದಲ್ಲ ನಾನಾ ಕಡೆ ನಾವು ಅವರನ್ನು ಸಂಭೋಧಿಸಿದ್ದೇವೆ. ಮತ್ತು ಅವರಿಗೆ ಗೌರವವನ್ನು ಏನು ಕೊಡಬೇಕಾಗಿದೆ ಅದನ್ನು ಈ ದೇಶದ ಎಲ್ಲಾ ಮೂರೆ ಮೂಲೆಗಳಲ್ಲೂ ಕೂಡ ಅರ್ಪಿಸುತ್ತಾ ಇದ್ದೇವೆ. ಅವರ ಮಾತು ನಾವು ಗೌರವಿಸಬೇಕಾದ್ದು ನಮ್ಮ ಆದ್ಯ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಅವರ ಮಾತಿನಲ್ಲಿ ಹೇಳಬೇಕಾಗಿದ್ದರೆ ಅವರು ಹೀಗೆ ಹೇಳುತ್ತಾ ಇದ್ದಾರೆ :—

"ನೀ ಹೆಟ್ಟುವ ನೆಲ ಇದೇ ಕರ್ನಾಟಕ
ನೀ ಏರುವ ಮರೆ ಸಹ್ಯಾದ್ರಿ
ನೀ ಮೆಚ್ಚುವ ಮರ ಶ್ರೀಗಂಧ
ನೀ ಕುಡಿವ ನೀರು ಕಾವೇರಿಯ ನೀರು", ಎಂದು.

ಕರ್ನಾಟಕ ಅನ್ನುವ ಭಾಗ ಎಷ್ಟು ಪವಿತ್ರವಾದದ್ದು ಮತ್ತು ಇದರ ಬಗ್ಗೆ ಅವರಲ್ಲಿ ಏನು ಅನುಕುಂಪ ಇದೆ, ಗೌರವ ಇದೆ. ಕರ್ನಾಟಕ ಎನ್ನುವ ಮಾತಿನ ಬಗ್ಗೆ ಅವರಿಗೆ ಎಷ್ಟು ಅಭಿಮಾನ ಇದೆ ಎಂಬುದನ್ನು ಇದು ವ್ಯಕ್ತಪಡಿಸುತ್ತದೆ. ಮತ್ತೆ ಇನ್ನೊಂದು ಪದ್ಯವನ್ನು ಓದುಪುದಾದರೆ ಎಷ್ಟು ಉತ್ತಮವಾದ ಪದದಲ್ಲಿ ಹೇಳುತ್ತಾ ಇದ್ದಾರೆ ಎಂಬುದನ್ನು ನೋಡಬಹುದು, "ಈ ಕನ್ನಡ ಎಂಬುದು ಎರಡು ಕೋಟಿ ಜನರು ಆಡುವ ಮಾತು ಮಾತ್ರವಲ್ಲ ಕರ್ನಾಟಕ ಅವರು ವಾಸ ಮಾಡುವ ನೆಲ ಮಾತ್ರವಲ್ಲ" ಎಂದು ಹೇಳುತ್ತಾ ಮುಂದೆ ಏನು ಹೇಳುತ್ತಾರೆ: "ಕರ್ನಾಟಕ ಮಾತೆ ಕಣಾ — ಶಕ್ತಿ ಕಣಾ — ತಾಯಿ ಕಣಾ — ದೈವ ಕಣಾ — ಬೆಂಕಿ ಕಣಾ — ಸಿಡಿಲು ಕಣಾ" ಎಂದು ಹೇಳುತ್ತಾ ಇದ್ದಾರೆ. ಎಂದರೆ ಈ ಕವಿಪುಂಗವರು ಕರ್ನಾಟಕವನ್ನು ಮಾತೆಯಾಗಿ ಸಂಭೋಧನೆ ಮಾಡಿದ್ದಾರೆ. ಮತ್ತು ಆದಿ ಶಕ್ತಿಯಾಗಿ ಸಂಭೋಧನೆ ಮಾಡಿದ್ದಾರೆ ಮತ್ತು 'ತಾಯಿ ಕಣಾ' ತಮ್ಮ ಹುಟ್ಟುತಾಯಿಯಾಗಿ ಸಂಭೋಧನೆ ಮಾಡಿದ್ದಾರೆ. "ದೈವ ಕಣಾ" ಪೂಜೆಗೆ ಅರ್ಹವಾದ ದೇವತಾ ಮೂರ್ತಿಯಾಗಿ ಸಂಭೋಧನೆ ಮಾಡಿದ್ದಾರೆ. ಅಷ್ಟೆ ಅಲ್ಲ ಮತ್ತೆ ಮುಂದೆ ಹೋಗಿ ಹೇಳುತ್ತಾರೆ "ಬೆಂಕಿ ಕಣಾ" ಏನಾದರೂ ವಿರುದ್ಧವಾಗಿ ನಡೆದುಕೊಂಡರೆ ಇದರ ಕಾರ್ಯ ಎಲ್ಲಿಯವರೆಗೆ ಹೋಗುತ್ತದೆ ಎಂದರೆ ಬೆಂಕಿ ಎಷ್ಟು ತೀಕ್ಷ್ಣವೂ ಅಷ್ಟು ತೀಕ್ಷ್ಣವಾಗಿರುತ್ತದೆ, ಮತ್ತು ಸಿಡಿಲಿನಂತೆ ಇರುತ್ತದೆ. ಬೆಂಕಿ ಕಣಾ, ಸಿಡಿಲು ಕಣಾ ಎಂದು ಹೇಳುತ್ತಾ ಇದ್ದರೆ. ಎಂದರೆ ಕರ್ನಾಟಕ ಶಬ್ದದ ಒಂದು ಔಚಿತ್ಯ ಮತ್ತು ಇದಕ್ಕೆ ಈ ಕವಿಪುಂಗವರು ಕೊಟ್ಟಿರತಕ್ಕ ಅರ್ಥವನ್ನು ನೋಡಿದರೆ ಬಹುಶಃ ಈ ದೇಶವನ್ನು ಅವರು ತಾಯಿಯಾಗಿ ಕಂಡಿದ್ದಾರೆ, ಆದಿಶಕ್ತಿಯಾಗಿ ಕಂಡಿದ್ದಾರೆ, ದೇವತೆಯಾಗಿ ಕಂಡಿದ್ದಾರೆ, ಮತ್ತು ಬೆಂಕಿ, ಸಿಡಿಲುಗಳಾಗಿ ಕಂಡಿದ್ದಾರೆ. ಈ ಕರ್ನಾಟಕದ ಬಗ್ಗೆ ಮತ್ತು ಕರ್ನಾಟಕ ಮಾತೆಯ ಬಗ್ಗೆ ಅವರಿಗೆ ಏನು ಅಭಿಮಾನ ಇದೆ ಮತ್ತು ಏನು ಗೌರವ ಇದೆ, ಏನು ಮರ್ಯಾದೆ ಇದೆ, ಏನು ಮಾತ್ಸಲ್ಯ ಇದೆ ಎಂಬುದು ಇದು ಪ್ರತಿಬಿಂಬಿಸುತ್ತದೆ. ಈ ಕರ್ನಾಟಕ ಅನ್ನುವುದು ಒಬ್ಬ ವ್ಯಕ್ತಿಯ ವಿಷಯಕ್ಕೆ ಅಗಲ ಅಥವಾ ಒಂದು ಧರ್ಮದ ಬಗ್ಗೆ ಅಗಲ, ಒಂದು ಸಾಂಪ್ರದಾಯದ ಬಗ್ಗೆ ಅಗಲ ಮಾಡಿರತಕ್ಕ ವಿಷಯವಲ್ಲ. ಇದರಲ್ಲಿ ಸಂಕುಚಿತ ಅಭಿಪ್ರಾಯ ಇಲ್ಲ. ಕೆಲವರಲ್ಲಿ ಬಂದಿರತಕ್ಕ ಅಭಿಪ್ರಾಯ, ಸಂಕುಚಿತವಾದ ಅಭಿಪ್ರಾಯವನ್ನು ಕಲ್ಪಿಸುತ್ತಾ ಇದೆ. ಕರ್ನಾಟಕ ಅಂತ ಹೇಳತಕ್ಕ ಮಾತಿನಲ್ಲಿ ಸಂಕುಚಿತ ಅಭಿಪ್ರಾಯವಿಲ್ಲ. ಇದರ ವ್ಯಾಕರಣವನ್ನು ಸ್ವಲ್ಪ ನೋಡಿದರೆ 'ಕರುನಾಡು ಅನ್ನುವುದು' ಕರ್ನಾಟಕ. ಕರುನಾಡು ಎಂದರೆ ಬಹಳ ವಿಶಾಲವಾದದ್ದು, ಬಹಳ ದೊಡ್ಡದಾದ ದೇಶ ಅಂತ ಅಭಿಪ್ರಾಯ ಬರುತ್ತದೆಯೇ ಹೊರತು ಮತ್ತೇನೂ ಅಲ್ಲ. ಇದು ಒಬ್ಬ ವ್ಯಕ್ತಿಗಾಗಲಿ, ಒಂದು ಧರ್ಮಕ್ಕಾಗಲಿ, ಒಂದು ಸಂಪ್ರದಾಯಕ್ಕಾಗಲಿ ಅಳವಡಿಸಿಕೊಂಡು ಯೋಚನೆ ಮಾಡಿದರೆ ಬಹಳ ತಪ್ಪಾಗುತ್ತದೆ ಮತ್ತು ಅಭಿಪ್ರಾಯ ಬಹಳ ಸಂಕುಚಿತವಾಗುತ್ತದೆ. ಈ ಮಾತಿನ ಉಪಯೋಗದಿಂದ ಕಹಿ ಎಳ್ಳಷ್ಟೂ ಇಲ್ಲ ಏನಾದರೂ ಇದ್ದದ್ದೇ ಆದರೆ ಸಿಹಿ ಮಾತ್ರವೇ ಹೊರತು ಕಹಿ ಮಾತ್ರ ಇಲ್ಲ. ಇಷ್ಟು ಹೇಳಿ ಇನ್ನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಇನ್ನು ನನ್ನ ಸ್ನೇಹಿತರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಹಿಂದೆ ನಮ್ಮ ನಾಡನ್ನು ಯಾರೂ "ಕರ್ನಾಟಕ"

ಎಂದು ಕರೆದಿಲ್ಲ ಎಂಬುದಾಗಿ ಹೇಳಿದ್ದಾರೆ. ಅದಕ್ಕಾಗಿ ನಾನೀಗ ಆ ನನ್ನ ಮಾನ್ಯ ಸ್ನೇಹಿತರ ಹಾಗೂ ಈ ಮಾನ್ಯ ಸಭೆಯ ಗಮನಕ್ಕೆ ಕೆಲವು ವಿಚಾರಗಳನ್ನು ಮಾನ್ಯ ಅಧ್ಯಕ್ಷರ ಮುಖೇನ ತರಲಚ್ಚಿಸುತ್ತೇನೆ.

"ಕರ್ನಾಟಕ" ಎಂಬ ಶಬ್ದವನ್ನು ನಮ್ಮ ನಾಡಿಗೆ ಸುಮಾರು ಕ್ರಿ. ಶ. ಒಂದನೆಯ ಶತಮಾನದಿಂದಲೂ ಬಳಸುತ್ತಿದ್ದುದಾಗಿ ಅನೇಕ ಉದ್ಗ್ರಾಮ ಗ್ರಂಥಗಳಿಂದ ಗೊತ್ತಾಗುತ್ತಿದೆ. ಅನೇಕ ವಿದ್ವಾಂಸರೂ ಹಾಗೂ ಪಂಡಿತೋತ್ತಮರೂ ಗಣ್ಯ ಸಾಹಿತಿಗಳೂ ಸಾರೇ ಸಾರಾಂಶವಾಗಿ ನಮ್ಮ ನಾಡಿಗೆ "ಕರ್ನಾಟಕ" ಎಂಬಶಬ್ದವನ್ನು ಬೆಳಸುತ್ತಿದ್ದರೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಆ ಬಗ್ಗೆ ಕೆಲವನ್ನೀಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಕ್ರಿ. ಶ. ಒಂದನೆಯ ಶತಮಾನಕ್ಕೆ ಸಂಬಂಧಿಸಿದ ಸಂಸ್ಕೃತ "ಮೃಚ್ಛಕಟಿಕ" ಎಂಬ ನಾಟಕದಲ್ಲಿ ಹಾಗೂ ಇತ್ತೀಚೆಗೆ ರಾಷ್ಟ್ರ ಪ್ರಶಸ್ತಿಯನ್ನು ಗಳಿಸಿರತಕ್ಕ ನಮ್ಮ ಶ್ರೀ ಕುವೆಂಪು ಅವರು ರಚಿಸಿರತಕ್ಕ ಹಾಗೂ ಇಡೀ ರಾಷ್ಟ್ರಕ್ಕೇ ಒಂದು ಪವಿತ್ರ ಗ್ರಂಥವೆನಿಸಿಸಿರತಕ್ಕ ಆ ರಾಮಾಯಣ ದರ್ಶನ ಎಂಬ ಗ್ರಂಥದಲ್ಲಿಯೂ ನಮ್ಮ ನಾಡಿಗೆ "ಕರ್ನಾಟಕ" ಎಂಬ ಶಬ್ದವನ್ನು ಬಳಸಿ ಈ ನಾಡನ್ನು ಕರ್ನಾಟಕ ಎಂದು ಕರೆದಿದ್ದಾರೆ. ಆ ಮೃಚ್ಛಕಟಿಕ ಎಂಬ ಸಂಸ್ಕೃತ ಗ್ರಂಥದಲ್ಲಿ "ಕರ್ನಾಟ ಕರಾಃ ಪ್ರಯೋಗಾಂ ಕರಿಷ್ಯಾಮಿ" ಎಂಬುದಾಗಿ ಅಲ್ಲಿ ಉದ್ಧರಿಸಿದ್ದಾರೆ. ಹೀಗೆ ಈ "ಕರ್ನಾಟಕ" ಎಂಬ ಶಬ್ದವನ್ನು ಕ್ರಿ. ಶ. ಒಂದನೆಯ ಶತಮಾನಕ್ಕಿಂತಲೂ ಹಿಂದಿನಿಂದಲೇ ಉಪಯೋಗಿಲ್ಪಡುತ್ತಿತ್ತು ಎನ್ನುವುದಕ್ಕೂ ಕೂಡ ಉತ್ಕೃಷ್ಟವಾದ ಗ್ರಂಥಾಧಾರಗಳಿವೆ ಎಂಬುದನ್ನು ಮಾನ್ಯ ಸದಸ್ಯರು ದಯವಿಟ್ಟು ಗಮನಿಸಬೇಕು. ಇನ್ನು ನಮ್ಮ ಈ ಕನ್ನಡನಾಡಿಗೆ "ಮಹಾ ಭಾರತ" ಎಂಬ ಬೃಹತ್ ಗ್ರಂಥದಲ್ಲಿ ಯಾವ ಶಬ್ದವನ್ನು ಬಳಸಲಾಗಿದೆ ಎಂಬುದನ್ನು ನೋಡುವುದಾದರೆ ನಮ್ಮ ಈ ನಾಡಿಗೆ ಆ ಗ್ರಂಥದಲ್ಲಿ "ಕರ್ನಾಟಕ" ಎಂಬ ಶಬ್ದವನ್ನು ಉಲ್ಲೇಖನ ಮಾಡಿರುವುದಾಗಿ ಕಂಡು ಬರುತ್ತಿದೆ. ಆ ವಿಚಾರವನ್ನು ನಾವು ಮಹಾಭಾರತದ ಅನೇಕ ಪರ್ವಗಳಲ್ಲಿ ಕಾಣಬಹುದಾಗಿದೆ. ಸಭಾಪರ್ವದ 78 ಮತ್ತು 98 ನೆಯ ಪದ್ಯಗಳಲ್ಲಿ ಹೀಗೆ ಉಲ್ಲೇಖಿಸಲಾಗಿದೆ: "ಕರ್ಣಾಟಕಾಂಶ್ಚ ಕುಟಚ್ಚ ಪದ್ಮಜೇ ಸತೀನಹಾ" ನಮ್ಮ ನಾಡಿಗೆ ಇಲ್ಲಿ ಕರ್ಣಾಟಕ ಎಂದು ಸಂಬೋಧನೆ ಮಾಡಲಾಗಿದೆ. ಇದಾದ ನಂತರ ಭೀಷ್ಮ ಪರ್ವದಲ್ಲಿ 9 ಮತ್ತು 58 ನೆಯ ಪದ್ಯಗಳಲ್ಲಿ ಹೀಗೆ ಉಲ್ಲೇಖಿಸಲಾಗಿದೆ. "ಕರ್ಣಾಟಕಃ ಮಹಿಷಿಃ" ಎಂದು. ಹೀಗೆ ಈ "ಕರ್ನಾಟಕ" ಎಂಬ ಶಬ್ದ ಇದು ನೆನ್ನೆ ಮೊನ್ನೆಯದಲ್ಲ. ಅಥವಾ ಐದನೂರು, ಸಾವಿರ ವರ್ಷಗಳದಷ್ಟೇ ಹಳೆಯದಲ್ಲ. ಇದು ಬಹಳ ಪ್ರಾಚೀನವೂ ಹಾಗೂ ಬಹಳ ಪವಿತ್ರವೂ ಆದ ಮಹಾಭಾರತದಲ್ಲೇ ಬಳಸಲ್ಪಟ್ಟಿದೆ. ಹೀಗೆ ಅನೇಕ ಉದ್ದಾಮ ಗ್ರಂಥಗಳಲ್ಲಿ ನಮ್ಮ ಕನ್ನಡ ನಾಡನ್ನು "ಕರ್ಣಾಟಕ" ಎಂಬುದಾಗಿ ಕರೆದಿರುವುದಕ್ಕೆ ಸಾವಿರಾರು ನಿದರ್ಶನಗಳಿವೆ.

ಇನ್ನು ಕೆಲವರು ಈ ಹೆಸರಿನಲ್ಲಿ ಏನಿದೆ! ನಾಡಿಗೆ ಯಾವುದೋ ಒಂದು ಹೆಸರಿದ್ದರಾಯಿತು ಎಂದು ಹೇಳಬಹುದು. ಆದರೆ ಇದು ಅಷ್ಟು ಹಗುರವಾಗಿ ಕಾಣತಕ್ಕ ಪ್ರಶ್ನೆಯಲ್ಲ ಹೆಸರಿನಲ್ಲೂ ಒಂದು ಮಹತ್ವವಿದೆ, ಗೌರವವಿದೆ, ಭೂಷಣವಿದೆ. ಈ ದಿವಸ ನಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಒಬ್ಬ ತಂದೆಗೆ ತನ್ನ ಮನೆಯಲ್ಲಿ ಒಂದು ಗಂಡೋ ಅಥವಾ ಹೆಣ್ಣೋ ಮಗು ಹುಟ್ಟಿದರೆ ಆ ಶಿಶುವಿಗೆ ಏನು ಹೆಸರನ್ನು ಇಡಬೇಕು, ಎಂದು ಯೋಚನೆ ಮಾಡುತ್ತಾನೆ. ಆ ಹೆಸರು ಎಂಥದಿರಬೇಕು; ನಾವು ಕರಣ ಎಂದು ನಡೆಸಬೇಕು ಎಂಬ ವಿಚಾರವನ್ನು ಪುರೋಹಿತನ ಬಳಿಗೆ ಹೋಗಿ ಮನೆ ಮಂದಿಯೆಲ್ಲಾ ಬಹಳ ಸಡಗರದಿಂದ ಕೇಳುತ್ತಾರೆ. ಇದು ಹಿಂದೂ ಸಂಪ್ರದಾಯದಲ್ಲಿ ಬಹಳ ಅನೂಚಾನವಾಗಿ ನಡೆದುಕೊಂಡು ಬಂದಿರತಕ್ಕ ವಿಷಯ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಹೀಗಿರುವಾಗ ಯಾವುದೋ ಒಂದು ಹೆಸರನ್ನಿಟ್ಟರಾಯಿತು, ಯಾವುದೋ ಒಂದು ಹೆಸರನ್ನು ಹಿಡಿದು ಕರೆದರಾಯಿತು ಅನ್ನುವುದಾಗಿದ್ದರೆ ಅಷ್ಟೇಕೆ ಆಚರಣೆಗಳನ್ನೆಲ್ಲಾ ನಡೆಸಬೇಕು! ನಮಗೆ ಆ ಹೆಸರುಗಳಲ್ಲಿ ಏನಿದೆ ಎಂಬುದನ್ನು ಕಣ್ಣಿನಿಂದ ನೋಡುವುದಕ್ಕಾಗದಿದ್ದರೂ ಮನಸ್ಸಿನಲ್ಲಿ ನಾವು ಅದರ ಆನಂದವನ್ನು ಅನುಭವಿಸುತ್ತೇವೆ — ಸುಖವನ್ನು ಕಾಣುತ್ತೇವೆ. ಅಂಥಾ ಒಂದು ಸೂಕ್ಷ್ಮವಾದ ಅಂಶ ಹೆಸರಿನಲ್ಲಿ ಅಡಗಿದೆ. ಹಾಗಿಲ್ಲ ಎನ್ನುವುದಾಗಿದ್ದ ಪಕ್ಷಕ್ಕೆ ಈ ದಿವಸ ಸಮಾಜದಲ್ಲಿ ಜನರು ಏಕೆ ತಮ್ಮ ಮನೆಗಳಲ್ಲಿ ಬಾಲಕ ಬಾಲಕಿಯರಿಗೆ — ಕಲ್ಲು — ಮರ — ಕವಣಿ ಎಂಬುದಾಗಿ ಹೆಸರುಗಳನ್ನು ಇಡಬಾರಾಗಿತ್ತು! ಅನೇಕರು ಈ ಹೆಸರುಗಳನ್ನು ಇಡತಕ್ಕ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಲೂ, ಜಾಣ್ಮೆಯಿಂದಲೂ ಹಾಗೂ ದೈವ ಭಕ್ತಿಯಿಂದಲೂ ನಡೆದುಕೊಳ್ಳುತ್ತಿದ್ದಾರೆಂಬ ಅಂಶವನ್ನು ಹಿಂದೂ ಸಂಸ್ಕೃತಿಯನ್ನರಿತವರಿಗೆ ನಾನು ಹೆಚ್ಚಿಗೆ ಒತ್ತಿ ಹೇಳಬೇಕಾಗಿಲ್ಲ. ಅಂತೂ ಈ ಹೆಸರುಗಳಲ್ಲಿಯೂ ಒಂದು ಪಾವಿತ್ರತೆ, ಮಹತ್ವ, ಆನಂದ, ಶುಭ ಹಾಗೂ ಮಂಗಳ ಇತ್ಯಾದಿ ಗುಣಗಳು

(ಶ್ರೀ ಬಿ. ಪಿ. ಗಂಗಾಧರ್)

ಅಡಗಿರುತ್ತವೆಂಬ ಒಂದು ಉದಾತ್ತವಾದ ಭಾವನೆಯಿಂದಲೇ ನಮ್ಮ ಪೂರ್ವಿಕರು ಬಹಳ ಪ್ರಾಚೀನ ಕಾಲದಿಂದಲೂ ನಮ್ಮ ನಾಡಿಗೆ ಈ "ಕರ್ಣಾಟಕ" ಎಂಬ ಶಬ್ದವನ್ನು ಅನೂಚಾನವಾಗಿ ಬಳಸಿಕೊಂಡು ಬಂದಿದ್ದಾರೆ.

ಇನ್ನು ಜೈನಮತೀಯರಿಗೆ ಬಹಳ ಪವಿತ್ರವೂ ಪ್ರಾಮಾಣಿಕವೂ ಹಾಗೂ ಪ್ರಾಚೀನವೂ ಆದ "ಪದ್ಮಪುರಾಣ" ಎಂಬುದು ಸರ್ವಮತೀಯರಿಂದಲೂ ಮನ್ನಣೆಗಳಿಸಿರತಕ್ಕ ಗ್ರಂಥ. ಈ ಗ್ರಂಥದಲ್ಲಿ ನಮ್ಮ ಈ ನಾಡನ್ನು ಯಾವ ಹೆಸರಿನಿಂದ ಉಲ್ಲೇಖಿಸರಾಗಿದೆ ಎಂದರೆ :— "ಹಾತಾಹಂ ದ್ರಾವಿಡ ದೇಶೇ ಕರ್ಣಾಟೇ" ಎಂದು ಉಲ್ಲೇಖಿಸರಾಗಿದೆ.

ಇನ್ನು ಇದಾದನಂತರ 9ನೆಯ ಶತಮಾನಕ್ಕೆ ಸೇರಿದವರೆಂದು ಹೇಳರಾದ ಹಾಗೂ ಮಹಾ ಮಾಮಾಂಸಕಾರನೆಂದು ಬಿರುದನ್ನು ಗಳಿಸಿರತಕ್ಕ ಷಡಕ್ಷರಿ ಎಂಬ ಉದ್ಧಾಮ ಕವಿಯು ತನ್ನ "ರಾಜಶೇಖರ ವಿರಾನ" ಎಂಬ ಉದ್ಗ್ರಂಥದಲ್ಲಿ ಹೀಗೆ ಉಲ್ಲೇಖಿಸಿದ್ದಾನೆ :— "ಸಗರ್ವಂ ಸರ್ವ ಕರ್ಣಾಟಕಂ" ಎಂದು. ಹೀಗೆ ಈ ಕರ್ಣಾಟಕ ಎಂಬ ಶಬ್ದ—ಬಹಳ ಪ್ರಾಚೀನ ಗ್ರಂಥವಾದ ಮಹಾ ಭಾರತದ ಸಭಾ ಪರ್ವ ಹಾಗೂ ಭೀಷ್ಮ ಪರ್ವಗಳ ಮೊದಲೊಂದು ಕ್ರಿ.ಶ. ಒಂದನೆಯ ಶತ ಮಾನಕ್ಕೆ ಸೇರಿವ ಸಂಸ್ಕೃತ ಗ್ರಂಥವಾದ ಮೃಚ್ಛಕಟಿಕದಲ್ಲೂ ಮತ್ತು ಒಂಭತ್ತನೆಯ ಶತಮಾನಕ್ಕೆ ಸೇರಿದ ರಾಜಶೇಖರ ಎಂಬ ಸಂಸ್ಕೃತ ಗ್ರಂಥದಲ್ಲೂ ಮತ್ತು ರಾಷ್ಟ್ರ ಪ್ರಶಸ್ತಿಯನ್ನು ಗಳಿಸಿದ ಕನ್ನಡಕವಿಕುಲತಿಲಕ ಶ್ರೀ ಕುವೆಂಪುರವರು ರಚಿಸಿರತಕ್ಕ ರಾಮಾಯಣದರ್ಶದಲ್ಲೂ ಅಸ್ತಿತ್ವದಲ್ಲಿರುತ್ತೆಂಬುದನ್ನು ನಾನು ಇಲ್ಲಿಯವರೆಗೂ ನಭೆಗೆ ಮನವರಿಕೆ ಮಾಡಿಕೊಟ್ಟಿದ್ದಾಯಿತು.

ಕೆಲವು ತಮಿಳು ಗ್ರಂಥಗಳಲ್ಲೂ ಕೂಡ ಈ ನಮ್ಮ ನಾಡಿಗೆ "ಕರ್ಣಾಟಕ" ಎಂಬ ಪದವನ್ನೇ ಬಳಸಿದ್ದಾರೆಂಬುದಾಗಿ ತಿಳಿದುಬರುತ್ತಿದೆ. ನಮ್ಮ ನಾಡು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿತ್ತು ಎಂಬುದನ್ನು ಪ್ರಸ್ತಾಪಿಸತಕ್ಕ ನಂದರ್ಭದಲ್ಲಿ ಆ ಶಬ್ದವನ್ನು ಬಳಸಿದ್ದಾರೆಂದು ಗೊತ್ತಾಗಿದೆ. ತಮಿಳು ಸಾಹಿತ್ಯದಲ್ಲಿ ಒಂದು ಕಡೆ ಹೀಗೆ ಉಲ್ಲೇಖರಾಗಿದೆ : "ಕೋರಮಂಡಳ್ ತೀರಂ ಕರ್ಣಾಟ್—ಕರುನಾಡ್" ಎಂದು. ಅಂದರೆ ತಮಿಳು ಸಾಹಿತ್ಯದಲ್ಲಿ "ಕರ್ಣಾಟಕ" ಎಂಬ ಶಬ್ದವನ್ನು "ಕರ್ನಾಡ್" ಎಂದು ಕರೆದಿದ್ದಾರೆ. ಇನೊಂದು ಕಡೆ ಒಬ್ಬ ಪ್ರಖ್ಯಾತ ಪ್ರಾಚೀನ ತಮಿಳು ಕವಿಯು—ಆತನ ಹೆಸರು ಇಲಂಕೋ ಅಡಿಗಳ್ ಎಂದು. ಆತನೊಬ್ಬ ಉದ್ಧಾಮ ತಮಿಳು ಕವಿಪುಂಗವ. ಆತನು ಕ್ರಿ.ಶ. 2—3ನೇ ಶತಮಾನದಲ್ಲಿದ್ದನೆಂದು ಹೇಳರಾಗುತ್ತಿದೆ, ಆ ಕವಿಯು ಒಂದು ಬಹಳ ಹೆಸರಾದ ತಮಿಳು ಪವಿತ್ರ ಗ್ರಂಥವನ್ನು ಬರೆದಿದ್ದಾನೆ. ಆ ಗ್ರಂಥದ ಹೆಸರು— "ಸಿಲಪ್ಪಾದಿಕಾರಂ" ಎಂದು. ಅದರಲ್ಲಿ ನಮ್ಮ ನಾಡನ್ನು "ಕರುನಾಡ್" ಎಂದು ಕರೆದಿದ್ದಾನೆ. ಈ ವಿಚಾರಗಳನ್ನೆರ್ಲಾ ನಾನು ಏತಕ್ಕೆ ನಮೂದಿಸಬೇಕಾಯಿತೆಂದರೆ ನಮ್ಮ ಈ ನಾಡಿಗೆ ಬಹಳ ಪ್ರಾಚೀನ ಕಾಲದಿಂದಲೂ "ಕರ್ಣಾಟಕ" ಎಂದು ಕರೆಯುತ್ತಿದ್ದರೆಂಬುದನ್ನು ಧೃಡಪಡಿಸಲು. ಕನ್ನಡ ತಮಿಳು ಹಾಗೂ ಸಂಸ್ಕೃತ, ಜೈನ ಗ್ರಂಥಗಳ ಉಲ್ಲೇಖಗಳಲ್ಲಿ ಉದಹರಿತವಾಗಿರುವ ಅನೇಕ ಗ್ರಂಥಗಳು ಕ್ರಿ.ಶ. ಕಕ್ಕೂ ಪೂರ್ವದವುಗಳೆಂಬುದನ್ನು ತಾವು ಅಂಗೀಕರಿಸಲೇಬೇಕು. ಅದಕಾಗಿಯೇ ಹಿಂದುಗಳಿಗೆ ಬಹಳ ಪವಿತ್ರವಾದ ರಾಮಾಯಣ—ಮಹಾಭಾರತ - ರಾಜಶೇಖರ ವಿರಾನ—ಪದ್ಮಪುರಾಣ, ಸಿಲಪ್ಪಾದಿಕಾರಂ ಇತ್ಯಾದಿ ಗ್ರಂಥಗಳ ಕಡೆಗೆ ನಭೆಯ ಗಮನವನ್ನು ಸೆಳೆದಿರುತ್ತೇನೆ. ಹೀಗೆ ಇಷ್ಟೆರ್ಲಾ ಪ್ರಾಚೀನ ಗ್ರಂಥಗಳ ಒಂದು ಆಧಾರವಿರುವಾಗ ಈ "ಕರ್ಣಾಟಕ" ಎಂಬ ಶಬ್ದವನ್ನು ಇತ್ತೀಚೆಗೆ ಯಾರೂ ಹೊಸದಾಗಿ ಸೃಷ್ಟಿಸಿ ಸಾಹಿತ್ಯದಲ್ಲಿ ಬೆರೆಸಲಲ್ಲ ಎಂಬುದನ್ನು ಮಾನ್ಯ ನಭೆಯವರು ಈಗ ಮನಗಂಡಾಯಿತು. ಇನ್ನು ನನ್ನ ಸ್ನೇಹಿತರಾದ ಶ್ರೀಮಾನ್ ಶ್ಯಾಮಣ್ಣನವರು ಹಿಂದಿನ ಕಾಲದಲ್ಲಿ "ವಿಜಯನಗರ" ಎಂಬ ಹೆಸರುಳ್ಳ ಒಂದು ಹಳ್ಳಿ ಇತ್ತು. ಜನರು ಅದನ್ನೇ "ವಿಜಯನಗರ" ಸಾಂಮ್ರಾಜ್ಯ ಎಂದು ಕರೆದಿರಬೇಕು ಎಂದು ಉದ್ಧರಿಸಿದರು. ಆದರೆ ಆ ಮಾನ್ಯ ಸದಸ್ಯರು ಆ "ವಿಜಯನಗರ" ಸಾಮ್ರಾಜ್ಯವನ್ನು ಸ್ಥಾಪಿಸಿದವರು ವಿದ್ಯಾರಣ್ಯರು ಎಂಬುದನ್ನು ಅವರು ಮರೆತಂತಿವೆ. ಆ ವಿದ್ಯಾರಣ್ಯರನ್ನು ಇಂದಿಗೂ "ಕರ್ಣಾಟಕ ಸಂಸ್ಥಾಪನಾಚಾರ್ಯ" ಎಂತಲೇ ಕರೆಯುತ್ತಿದ್ದಾರೆ. ಹೀಗೆ ಈ ಕರ್ಣಾಟಕ ಎಂಬ ಹೆಸರು ಎಷ್ಟು ಪ್ರಾಚೀನವಾದದ್ದು ಎಂಬುದಕ್ಕೆ ಒತ್ತಿ ಒತ್ತಿ ಹೇಳಬೇಕಾಗಿಲ್ಲ. ನಮ್ಮ ಮೈಸೂರು ರಾಜಮನೆತನಕ್ಕೆ ಇಂದಿಗೂ ಅವರನ್ನು "ರಾಜಾಧಿರಾಜ ಕರ್ಣಾಟಕ ರತ್ನಸಿಂಹಾಸನಾಧೀಶ್ವರ ಶ್ರೀಮನ್ಮಹಾರಾಜ" ಇತ್ಯಾದಿ ಬಿರುದುಗಳಿಂದ ಕರೆಯುತ್ತಿದ್ದಾರೆಂಬುದಕ್ಕೆ ಆಧಾರಗಳೆಷ್ಟು ಬೇಕು !

6-30 P.M.

ಈ ಕರ್ಣಾಟಕವೆನ್ನುವ ಹೆಸರು ಬಹಳ ಪವಿತ್ರವಾದುದು, ಬಹಳ ಪುರಾತನವಾದುದು. ಹಾಗೆ ಮೈಸೂರು ಎನ್ನುವ ಹೆಸರು ಇರಬೇಕು ಅದು ಒಂದು ಊರಿನ ಹೆಸರು, ಅದನ್ನು ತೆಗೆದು ಹಾಕುವುದನ್ನು ನಾನು ಒಪ್ಪುವುದಿಲ್ಲವೆಂದು ಮಾನ್ಯ ಶ್ರೀ ಶಾಮಣ್ಣನವರು ಹೇಳಿದರು. ಮೈಸೂರು ಎನ್ನುವುದು ಒಂದು ಊರಿನ ಹೆಸರೇ ಹೊರತು ಒಂದು ದೇಶದ ಹೆಸರಾಗುವುದಿಲ್ಲ. ಸುಮಾರು 200—300 ವರ್ಷಗಳ ಚರಿತ್ರೆಯನ್ನು ತೆಗೆದುಕೊಂಡು ನೋಡಿದರೆ, ಮೈಸೂರು ಎಂದು ಕರೆಯಬೇಕಾದ ಸನ್ನಿವೇಶ ಏಕೆ ಬಂತು ಎನ್ನುವುದು ಅವರಿಗೂ ಗೊತ್ತಿದೆ, ನಮ್ಮೆಲ್ಲರಿಗೂ ಗೊತ್ತಿದೆ. ಇಡೀ ವಿಶ್ವದ ಸಂಪ್ರದಾಯ ಮತ್ತು ಸ್ಥಿತಿಗತಿಗಳನ್ನು ನೋಡಿದರೆ, ಬೇರೆಬೇರೆ ದೇಶಗಳಲ್ಲಿ ಆಯಾ ದೇಶದ ಜನ ಮಾತನಾಡತಕ್ಕ ಭಾಷೆಗೂ ಆ ದೇಶದ ಹೆಸರಿಗೂ ಹೊಂದಾಣಿಕೆ ಇರುವುದು ಕಂಡುಬರುತ್ತದೆ. ಈ ದೇಶದಲ್ಲೂ ಅದೇ ರೀತಿ ಕರದಿದ್ದಾರೆ. ನಮ್ಮಲ್ಲಿ ಕೆಲವು ಉದಾಹರಣೆಗಳನ್ನು ತೆಗೆದುಕೊಂಡರೆ ಆಂಧ್ರ ಭಾಷೆ ಮಾತನಾಡತಕ್ಕ ದೇಶಕ್ಕೆ ಆಂಧ್ರಪ್ರದೇಶವೆಂತಲೂ ಒರಿಯಾ ಭಾಷೆ ಮಾತನಾಡತಕ್ಕ ದೇಶಕ್ಕೆ ಒರಿಸ್ಸಾ ಎಂತಲೂ, ಬಂಗಾಳಿ ಭಾಷೆ ಮಾತನಾಡತಕ್ಕ ದೇಶಕ್ಕೆ ಬಂಗಾಳವೆಂತಲೂ, ಮರಾಠಿ ಮಾತನಾಡತಕ್ಕ ದೇಶಕ್ಕೆ ಮಹಾರಾಷ್ಟ್ರವೆಂತಲೂ ಹೇಳುತ್ತಿದ್ದಾರೆ. ಇದೆಲ್ಲವೂ ನಮ್ಮ ದೇಶದೊಳಗೆ ಆಯಿತು. ಇನ್ನು ಹೊರಗೆ ಇರುವ ದೇಶಗಳನ್ನು ಅವಲೋಕನಮಾಡಿ ನೋಡಿದರೆ, ಸಿರೋನೀಸ್ ಭಾಷೆ ಮಾತನಾಡತಕ್ಕ ದೇಶಕ್ಕೆ ಸಿರೋನ್ ಎಂತಲೂ, ಬರ್ಮಿಸ್ ಭಾಷೆ ಮಾತನಾಡತಕ್ಕ ದೇಶಕ್ಕೆ ಬರ್ಮಾ ಎಂತಲೂ, ಇಂಗ್ಲಿಷ್ ಭಾಷೆ ಮಾತನಾಡತಕ್ಕ ದೇಶಕ್ಕೆ ಇಂಗ್ಲೆಂಡ್ ಎಂತಲೂ, ಫ್ರೆಂಚ್ ಭಾಷೆ ಮಾತನಾಡತಕ್ಕ ದೇಶಕ್ಕೆ ಫ್ರಾನ್ಸ್ ಎಂತಲೂ, ರಷ್ಯನ್ ಭಾಷೆ ಮಾತನಾಡತಕ್ಕ ದೇಶಕ್ಕೆ ರಷ್ಯಾ ಎಂತರೂ, ಚೈನೀಸ್ ಭಾಷೆ ಮಾತನಾಡತಕ್ಕ ದೇಶಕ್ಕೆ ಚೈನಾ ಎಂತಲೂ—ಹೀಗೆ ಇತ್ಯಾದಿ ಇತ್ಯಾದಿ ಆಯಾ ಭಾಷೆಗೆ ಅನ್ವಯವಾದಂತೆ ಆಯಾ ದೇಶದ ಹೆಸರುಗಳನ್ನು ಕರೆದುಕೊಂಡು ಹೋಗಿದ್ದಾರೆ. ಇದನ್ನು ನೋಡಿದರೆ ಕರ್ಣಾಟಕವೆಂದು ಕರೆಯುವುದಕ್ಕೆ ಅವು ವಿಕ್ಲೂಪಿಯಾಗುತ್ತವೆ. ಮೈಸೂರು ಎಂದು ಒಂದು ದೇಶ ಇತ್ತೋ ಎಂದೆನ್ನಿಸುತ್ತದೆ.

Sri D. B. KALMANKAR (Aland).—Because Hindi is used, it is called Hindusthan.

ಶ್ರೀ ಬಿ. ಪಿ. ಗಂಗಾಧರ್.—ಹಿಂದೂಸ್ಥಾನ ಎಂದು ಕರೆಯಬೇಕಾದರೆ ಬಹಳ ಜನರು ಹಿಂದಿಯನ್ನು ಮಾತನಾಡಬೇಕು. ಇದರ ಬಗ್ಗೆ ಈಗಾಗಲೇ ಮಾನ್ಯ ಶ್ರೀ ಗೋಪಾಲಗೌಡರು ಎಲ್ಲವನ್ನೂ ಮಾತನಾಡಿದ್ದಾರೆ. ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗಿನಲ್ಲಿ ಅಸಂಖ್ಯಾತ ಉಲ್ಲೇಖಗಳಿವೆ. ಮೈಸೂರು ಕರ್ಣಾಟಕದ ಒಂದು ಭಾಗವೆಂಬುದನ್ನು ಮರೆಯಬಾರದು. ಇಡೀ ಭೂಭಾಗಕ್ಕೆ ಮೈಸೂರು ಎಂದು ಕರೆಯುವುದು ಅಷ್ಟು ಸರಿಯಲ್ಲ. ಪ್ರಾಚೀನ ಕಾಲದಲ್ಲಿ ಕರ್ಣಾಟಕ ಎಂದು ಕರೆದಿರುವುದರಿಂದ ಈಗಲೂ ಕರ್ಣಾಟಕವೆಂದು ಕರೆಯುವುದರಲ್ಲಿ ಬಹಳ ಔಚಿತ್ಯವಿದೆ. ಅಷ್ಟೇ ಅಲ್ಲ. ಕರ್ಣಾಟಕದ ಪೂರ್ಣ ಚರಿತ್ರೆಯನ್ನು ನೋಡಿದರೆ, ಸಾಹಿತ್ಯ ದೃಷ್ಟಿಯಿಂದಲೂ ಸಾಂಸ್ಕೃತಿಕ ದೃಷ್ಟಿಯಿಂದಲೂ ಕರ್ಣಾಟಕವೆಂದು ಕರೆಯುತ್ತಿರುವುದು ಗೊತ್ತಾಗುತ್ತದೆ. ಆ ರೀತಿಯಾಗಿ ಅನೂಚಾನವಾಗಿ ಕರೆದುಕೊಂಡು ಬಂದಿದ್ದಾರೆ. ಅದರ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಕರ್ಣಾಟಕದ ಲಲಿತಕಲೆಗಳಲ್ಲಿ ಅತಿಮುಖ್ಯವಾದ ಕಲೆಗಳಿವೆ. ಆ ಕಲೆಗಳು ಇಡೀ ಕರ್ಣಾಟಕದಲ್ಲಿ ಸರ್ವವ್ಯಾಪ್ತಿಯಾಗಿದೆ. ಅದರ ಬಗ್ಗೆ ಕರ್ಣಾಟಕವೆಂದು ಹಿಂದಿನಿಂದಲೂ ಅನೂಚಾನವಾಗಿ ಕರೆದುಕೊಂಡು ಬಂದಿದ್ದಾರೆ. ನಮ್ಮಲ್ಲಿ ಕರ್ಣಾಟಕ ಸಂಗೀತ ಎಂದಿದೆ. ಕರ್ಣಾಟಕ ಸಂಗೀತವನ್ನು ಕೇಳದವರು ಯಾರೂ ಇಲ್ಲ. ಕರ್ಣಾಟಕ ಸಂಗೀತ ಹೆಚ್ಚು ಮೋಹಕವಾಗಿ ಕಿವಿಗೆ ಕರ್ಣಾನಂದವಾಗಿರತಕ್ಕ ಸಂಗೀತ. ಇದು ಬಹಳ ಪುರಾತನವಾದುದು, ಅನೂಚಾನವಾಗಿ ಒಂದನೇ ಶತಮಾನದಿಂದಲೂ ಬಂದಿದೆ. ಕರ್ಣಾಟಕದ ಸಂಗೀತ ಏನು ಇದೆ ಅದನ್ನು ಎಲ್ಲರೂ ಮೆಚ್ಚಿ ಇಡೀ ಇಂಡಿಯಾ ದೇಶದಲ್ಲೆಲ್ಲ ಇಡೀ ಪ್ರಪಂಚದಲ್ಲಿ ಕರ್ಣಾಟಕ ಸಂಗೀತ ಒಳ್ಳೆಯ ಹೆಸರುವಾಸಿಯಾದ ಸಂಗೀತ. ಈ ಸಂಗೀತವನ್ನು ಸಂಬೋಧನೆಮಾಡುವಾಗ ಅದನ್ನು ಕರ್ಣಾಟಕ ಸಂಗೀತ ಎಂದು ಹೆಸರು ಕೊಟ್ಟಿದ್ದಾರೆ. ಹಿಂದಿನ ಕಾಲದಿಂದಲೂ ಒಂದು ವಿಧವಾದ ಸಂಸ್ಕೃತಿ, ನಡೆನುಡಿ, ಬಹಳ ಅನೂಚಾನವಾಗಿ ನಡೆದುಕೊಂಡು ಬಂದು ಅದು ಅಲ್ಲಿ ಬೇರುಬಿಟ್ಟುಕೊಂಡಿದೆ. ನಮ್ಮ ಸಮಾಜದಲ್ಲಿ ನಮ್ಮ ನಡೆನುಡಿಗಳಲ್ಲಿ ಅವರಲ್ಲಿಯೂ ಎಲ್ಲಾ ಸಂದರ್ಭಗಳಲ್ಲಿಯೂ ಕರ್ಣಾಟಕ ಎಂಬ ಶಬ್ದವನ್ನು ಲೀಲಾಜಾಲವಾಗಿ ಪುರಾತನ ಕಾಲದಿಂದಲೂ ಉಪಯೋಗಿಸಿಕೊಂಡು ಬಂದಿದ್ದೇವೆ. ಕಟ್ಟಡಗಳನ್ನು ಕಟ್ಟುವ, ಮನೆಗಳನ್ನು ಕಟ್ಟುವ ಹಾಗೂ ದೇವಸ್ಥಾನಗಳನ್ನು ಕಟ್ಟುವ ಶಿಲ್ಪಗಳಲ್ಲಿ ನಾನಾ ತರಹ ಶಿಲ್ಪಗಳೂ ಉಂಟು. ಒಳ್ಳೆಯ ಹೆಸರುವಾಸಿಯಾದಂಥ ವಾಸ್ತು ಶಿಲ್ಪ ಕರ್ಣಾಟಕ ವಾಸ್ತು ಶಿಲ್ಪ. ಪುರಾತನ ಕಾಲದಲ್ಲಿ ಕರ್ಣಾಟಕದ ಇಂಜಿನೀಯರು ಕಟ್ಟಡಗಳನ್ನು, ಮನೆಗಳನ್ನು ಅವರದೇ ಆದ

(ಶ್ರೀ ಬಿ. ಪಿ. ಗಂಗಾಧರ್)

ಒಂದು ರೀತಿಯಲ್ಲಿ ಕಟ್ಟುವುದು ಎದ್ದು ಕಾಣುತ್ತದೆ. ಅದೇ ಕರ್ನಾಟಕ ವಾಸ್ತು ಶಿಲ್ಪ. ಇದರಿಂದೇನು ಗೊತ್ತಾಗುತ್ತದೆಂದರೆ, ಕರ್ನಾಟಕ ಎಂಬುದು ಜನಜೀವನದಲ್ಲಿ ಹಾಸುಹೊಕ್ಕಾಗಿ ಬಂದಿದೆ. ಕರ್ನಾಟಕ ಎನ್ನುವ ಹೆಸರಿನ ಬಳಕೆ ಹಿಂದೆ ಇದ್ದುದಕ್ಕೆ ಸಾಕಷ್ಟು ನಿದರ್ಶನಗಳಿವೆಯೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದನೇ ಶತಮಾನದಿಂದ ಆದಿಯಿಂದ ನೋಡಿದರೂ ಕೂಡ, ಈ ಕರ್ನಾಟಕ ಶಬ್ದದ ಪವಿತ್ರತೆಗೆ ನಮ್ಮ ಹಿಂದಿನ ಜನರು ಮರ್ಯಾದೆ, ಘನತೆ, ಗಾಂಭೀರ್ಯ, ವಿಶ್ವಾಸ, ಪ್ರೀತಿ ಇಟ್ಟುಕೊಂಡಿರುವುದನ್ನು ನೋಡುತ್ತೇವೆ. ಹಾಗೆಯೇ ನಮ್ಮ ದೇಶದಲ್ಲಿ ವಿಧವಿಧವಾದಂಥ ನರ್ತನಗಳು, ನಾಟ್ಯಗಳು, ಮತ್ತು ನೃತ್ಯಗಳು ಬಹಳ ಪುರಾತನ ಕಾಲದಿಂದಲೂ ನಡೆದುಕೊಂಡುಬಂದಿದೆ. ನಮ್ಮ ದೇಶದ ಒಂದೊಂದು ಭಾಗದಲ್ಲಿಯೂ ಒಂದೊಂದು ರೀತಿ ಇದ್ದರೂ ಕೂಡ ನಮ್ಮ ಭೂಭಾಗದಲ್ಲಿ ತಯಾರಾದಂಥ ನೃತ್ಯ ಈ ಭೂಭಾಗಕ್ಕೆ ಸೀಮಿತವಾಗಿದೆಯೆಂದು ನನ್ನ ಅಭಿಪ್ರಾಯ. ಅದಕ್ಕೆ ಏನು ಹೆಸರು ಕೊಟ್ಟಿದ್ದಾರೆ ಅಂದರೆ, 'ಕರ್ನಾಟಕದ ಜನಪದ ನೃತ್ಯ' ಎಂಬುದಾಗಿ ಕರೆದುಕೊಂಡು ಬಂದಿದ್ದಾರೆ. ನಮ್ಮ ಸಂಗೀತಕ್ಕೂ ಕೂಡ 'ಕರ್ನಾಟಕ ಸಂಗೀತ' ಎಂಬುದಾಗಿ ಹೇಳುತ್ತಿದ್ದಾರೆ. ನಮ್ಮ ಜನಜೀವನದಲ್ಲಿ ಇದು ಹಾಸುಹೊಕ್ಕಾಗಿದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮನಸ್ಸು ಹಗುರವಾದಾಗ ಆಥವಾ ಲವಲವಿಕೆಯಾದಾಗ ಅಥವಾ ಕೊಂಚಹೊತ್ತು ಕಾಲವನ್ನು ಸುಖವಾಗಿ ಕಳೆಯಬೇಕೆಂದು ಮನಸ್ಸು ಬಂದಾಗ, ಕರ್ನಾಟಕ ಸಂಗೀತ ಕೇಳಿದರೆ ಬಹಳ ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗಾರಾಜ್.—ಹೇಗೆ ಹಾಡುವುದು ?

ಶ್ರೀ ಬಿ. ಪಿ. ಗಂಗಾಧರ್.—ನಮ್ಮದೇ ಆದ ಸಂಗೀತವಿದೆ. ಅದನ್ನು ಕರ್ನಾಟಕ ಸಂಗೀತ ವೆಂದು ಕರೆಯುತ್ತಾರೆ. ಅದನ್ನು ಹಾಡಿಕೊಂಡು ಸಂತೋಷಪಡುತ್ತಾರೆ. ನಮ್ಮ ಭಾಗದ ಜನಗಳನ್ನು ಸಂತೋಷಪಡಿಸುವುದಕ್ಕಾಗಿ ಮುಂಚಿತವಾಗಿಯೇ ಇಲ್ಲಿ ಅನೂಚಾನವಾದ ಪ್ರಯತ್ನ ಗಳನ್ನು ಮಾಡಿದ್ದಾರೆ. ನಾವು ವಾಸಮಾಡತಕ್ಕ ಮನೆಗಳು ದೇವಸ್ಥಾನಗಳನ್ನು ಕಟ್ಟಿರತಕ್ಕ ಕಟ್ಟಡಗಳು ಏನಿವೆ, ಅವನ್ನು ಕರ್ನಾಟಕ ವಾಸ್ತು ಶಿಲ್ಪದಿಂದಲೇ ಕಟ್ಟಿಕೊಂಡು ಬಂದಿದ್ದಾರೆ. ಅದು ಒಂದು ಹೆಮ್ಮೆ. ಆದರೆ ನಾವು ಸುಖಪಡಬೇಕೆಂದು ವಿರಾಮವಾದಾಗ, ಬಾಲ್‌ರೂಂ ಡ್ಯಾನ್ಸ್, ಅಥವಾ ಇನ್ನೊಂದು ತರಹ ಡ್ಯಾನ್ಸ್ ಮಾಡುವುದಕ್ಕೆ ಹೋಗಿಲ್ಲ. ನಮ್ಮ ದೇಶದ ಸಂಸ್ಕೃತಿ ಬಹಳ ಪುರಾತನವಾದುದು ಮತ್ತು ವಿವಿಧ ಧ್ಯೇಯಗಳಿಂದ ಕೂಡಿದೆ. ನಮ್ಮ ದೇಶದ ಜನಪದ ನೃತ್ಯ, ಮಹಾರಾಜರ ಕಾಲದಿಂದಲೂ, ಕರ್ನಾಟಕದ ಜನಪದ ನೃತ್ಯವೆಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಅಂದರೆ ಕರ್ನಾಟಕ ಎಂಬ ಶಬ್ದ ಇವತ್ತಿನ ದಿವಸ ತಯಾರಾದುದಲ್ಲ. ಇದು ಬಹಳ ಪುರಾತನವಾದುದು. ಇದರಲ್ಲಿ ಸಿಹಿ ಇದೆಯೇ ಅಲ್ಲದೆ, ಕಹಿಯಿಲ್ಲ. ಮೈಸೂರು ಗೆಜೆಟಿಯರ್ ವಾಲ್ಯೂಂ ನಂ. 1, ಪೇಜ್ 250, ಪ್ಯಾರಾ 2 ರಲ್ಲಿ ಕರ್ನಾಟಕ ಎನ್ನತಕ್ಕಂತಹ ಶಬ್ದವೂ ಉಲ್ಲೇಖವಾಗಿದೆ. ಅದು ಸರ್ಕಾರದ ವತಿಯಿಂದ ಪ್ರಕಟಣೆಯಾದಂತಹ ಗೆಜೆಟ್. ಅಂದರೆ ಕರ್ನಾಟಕ ಎಂಬ ಶಬ್ದ ಬಹಳ ಪುರಾತನವಾದುದು. ಅದನ್ನು ಇಲ್ಲಿ ಓದಿ ಹೇಳಬೇಕಾದ ಸನ್ನಿವೇಶ ಇಲ್ಲವೆಂದು ತಿಳಿದುಕೊಂಡಿದ್ದೇನೆ. ನಮ್ಮ ಮಿತ್ರರಾದ ಮಾನ್ಯ ಶಾಮಣ್ಣನವರು, ಹೈದರಾಬಾದ್‌ನಿಂದ ಬಂದಿರತಕ್ಕ ಪ್ರದೇಶ, ಮದ್ರಾಸಿನಿಂದ ಬಂದಿರತಕ್ಕ ಪ್ರದೇಶ, ಬಾಂಬೆಯಿಂದ ಬಂದಿರತಕ್ಕ ಪ್ರದೇಶ ಇವೆರ್ನಾ ಬಂದಾಗಿಂದಲೂ ಕೆಲವು ಅಧಿಕಾರಿಗಳಿಗೆ ಬಹಳ ತೊಂದರೆಯಾಗಿದೆ. ಸಿಕ್ಕಬೇಕಾದ ಪ್ರಮೋಶನ್ಸ್ ಸಿಕ್ಕಿಲ್ಲವೆಂದು ಹೇಳಿದರು. ಆದ್ದರಿಂದ ಅದರ ಹೆಸರನ್ನು ಬದಲಾವಣೆ ಮಾಡುವುದು ಬೇಡವೆಂದೂ ಹೇಳಿದರು. ನಾನಾದರೂ ಹೇಳುತ್ತೇನೆ, ಏನೆಂದರೆ, ಕೆಲವು ಅಧಿಕಾರಿಗಳಿಗೆ ತೊಂದರೆಯಾಗಿರ ಬಹುದು. ಬರಬೇಕಾದಂತಹ ಪ್ರೊಮೋಶನ್ಸ್ ಬರಲಿಲ್ಲ, ಆದ್ದರಿಂದ ಅದನ್ನು ಬದಲಾವಣೆ ಮಾಡುವುದು ಬೇಡ ಎಂದು ಹೇಳುವುದಾದರೆ ಈ ಹೆಸರಿಗೂ, ಅದಕ್ಕೂ ಏನು ಸಂಬಂಧ ? ಇಮಾಮ್ ಸಾಹೆಬ್‌ರಿಗೂ, ಗೋಕುಲಾಷ್ಟಮಿಗೂ ಹೇಗೆ ಸಂಬಂಧವೋ ಹಾಗೆ ಇದರ ಸಂಬಂಧ ಇದೆ ಎಂದು ಹೇಳಿದರೆ ಯಾರೂ ತಪ್ಪಾಗಿ ತಿಳಿದುಕೊಳ್ಳಬಾರದು. ಈಗ ಕೆಲವು ಅಧಿಕಾರಿಗಳಿಗೆ ತೊಂದರೆ ಯಾಗಿರಬಹುದು. ಬಹುಶಃ ಸರ್ಕಾರ ತಪ್ಪು ಮಾಡಿರಬಹುದು; ಅಥವಾ ಸೀನಿಯಾರಿಟಿ ಲಿಸ್ಟ್ ಮಾಡಿರುವ ಸನ್ನಿವೇಶದಲ್ಲಿ ಏನಾದರೂ ತೊಂದರೆಯಾಗಿರಬಹುದು; ಅದಕ್ಕೆ ಹೈಕೋರ್ಟ್ ಇದೆ, ಸುಪ್ರೀಂ ಕೋರ್ಟ್ ಇದೆ. ಈಗ ಆಗಿರುವುದು ಎಲ್ಲಾ ಸರಿ ಎಂದು ನಾನು ಹೇಳತಕ್ಕಂಥವನಲ್ಲ. ಎಲ್ಲರೂ ಹೈಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿಕೊಂಡುಬಿಡಿ. ಎಂದು ನಾನು ಹೇಳುತ್ತಾ ಇಲ್ಲ. ಎಲ್ಲರಿಗೂ ರೂಲ್ಸ್ ಪ್ರಕಾರ ದೊರಕಬೇಕಾದ ನ್ಯಾಯ ದೊರಕ ಬೇಕು : ಆದ್ದರಿಂದ ಯಾರಿಗೋ ತೊಂದರೆಯಾಯಿತು, ಅದಕ್ಕೋಸ್ಕರ ಹೆಸರು ಬೇಡ ಎನ್ನ ತಕಂಥದ್ದು ಸಮಂಜಸವಲ್ಲ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ತಾವು ಕೈವಾರದ ನಾರಣಪ್ಪನ ಪುಸ್ತಕ ತರಿಸಿಕೊಳ್ಳಿ. ಅದರಲ್ಲಿ ಎಲ್ಲಾ ಇದೆ.

ಶ್ರೀ ಬಿ. ಪಿ. ಗಂಗಾಧರ್.—ತಾವು ಆ ಪುಸ್ತಕವನ್ನು ಕಳಿಸಿಕೊಡಿ, ಅದನ್ನು ತರಿಸಿಕೊಟ್ಟರೆ ನಾನು ತಮಗೆ ಬಹಳ ಆಭಾರಿಯಾಗಿರುತ್ತೇನೆ. ಮೊದಲು ಕರ್ನಾಟಕ ಸಾಮ್ರಾಜ್ಯ ಹೇಗಿತ್ತು, ಕರ್ನಾಟಕದ ಮಹತ್ವ ಏನಿತ್ತು ಮತ್ತು ಆಗಿನ ಜನರಲ್ಲಿದ್ದಂಥ ಪ್ರೀತಿ ವ್ಯಾತ್ಸಲ್ಯಗಳನ್ನೆಲ್ಲಾ ನೋಡಿದರೆ ನಮಗೇ ತಿಳಿಯುತ್ತದೆ. ಶಾಮಣ್ಣನವರು ಹೇಳುವುದೇನೆಂದರೆ, 1947ನೇ ಇಸವಿಗಿಂತ ಹಿಂದೆ ಮೈಸೂರು ಎಂಬುವಾಗಿ ಇತ್ತು ಎಂದು. ಇದು ಸಮಂಜಸವಾದ ಉತ್ತರವಲ್ಲವೆಂದು ಕಾಣುತ್ತದೆ. ಪುಸ್ತಕ ಕೊಟ್ಟರೆ ಓದಿ ಹೇಳಬಹುದು ಶಾಮಣ್ಣನವರ ವಾದ ಏನೆಂದರೆ ಕೆಲವು ಭೂಭಾಗಗಳು ಮೈಸೂರಿಗೆ ಸೇರಿದಮೇಲೆ ಆ ಭೂಭಾಗಗಳಿಗೆ ಮಂತ್ರಿಗಳ ರಿಪ್ರಸೆಂಟೇಶನ್ ಕಡಿಮೆ ಇತ್ತು, ಅದನ್ನು ಹೋಗರಾಡಿಸಲು ಗುಲ್ಬರ್ಗಾದಿಂದ ಎಷ್ಟು ಜನ ಮಂತ್ರಿಗಳನ್ನು ತೆಗೆದು ಕೊಂಡರು, ಹಾಗೂ ಇನ್ನಿತರ ಪ್ರದೇಶಗಳಿಂದ ಎಷ್ಟು ಜನ ಮಂತ್ರಿಗಳನ್ನು ತೆಗೆದುಕೊಂಡರು ಎಂಬುದನ್ನು ತಿಳಿಸುತ್ತಾ ಇನ್ನು ಏನೇನೋ ಹೇಳಿದರು. ಅದಕ್ಕೂ ಇದಕ್ಕೂ ಏನು ಸಂಬಂಧವೆಂದು ಗೊತ್ತಾಗಲಿಲ್ಲ. ಯಾರಿಗೆ ಎಲ್ಲರಲ್ಲಿ ನಂಬಿಕೆ ಇದೆ, ಯಾರು ಮೆಜಾರಿಟಿಯ ನಂಬಿಕೆಗೆ ಪಾತ್ರರಾಗುತ್ತಾರೆ ಅವರು ಮುಖ್ಯಮಂತ್ರಿಯಾಗುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಈ ಸಭೆಯ ಮುಂದೆ ಇರುವ ವಿಚಾರಕ್ಕೂ ತಾವು ವಾಖ್ಯಾನ ಮಾಡುವುದಕ್ಕೂ ಅಜಗಜಾಂತರ ಇದೆ.

ಶ್ರೀ ಬಿ. ಪಿ. ಗಂಗಾಧರ್.—ಅದನ್ನು ಪ್ರಸ್ತಾಪ ಮಾಡುತ್ತಾ ಇರಲಿಲ್ಲ. ಅದರ ಬಗ್ಗೆ ಸಾಕಷ್ಟು ಇಲ್ಲಿ ಭಾಷಣ ನಡೆದಿದೆ. ಅದರ ಬಗ್ಗೆ ಅರ್ಧ ಮುಕ್ಕಾಲು ಗಂಟೆ ಮಾತನಾಡಿದರು. ಅದಕ್ಕೋಸ್ಕರ ಆ ವಿಷಯವನ್ನು ಹೇಳದಿದ್ದರೆ ನನ್ನ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ ಎನ್ನುವ ದೃಷ್ಟಿಯಿಂದ ನಾನು ಆ ವಿಷಯವನ್ನು ಹೇಳಿದ್ದೇನೆ. ನನಗೂ ಅದಕ್ಕೂ ಸಂಬಂಧ ಇಲ್ಲ. ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಕಾಂಗ್ರೆಸ್ ಸರ್ಕಾರ ಅದಷ್ಟು ಬೇಗ ಕೆಳಗಡೆ ಇಳಿಯಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಆದ್ದರಿಂದ ಅವರು ಯಾರು ಏನು ಬೇಕಾದರೂ ಮಾಡಿಕೊಳ್ಳಲಿ. ಶ್ರೀಮಾನ್ ಶಾಮಣ್ಣನವರು ಹೇಳಿದ ವಿಷಯದ ಬಗ್ಗೆ ನಾನು ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಹಿಂದೆ ಕೆಲವರು ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಟ್ಟರೆ ಅದರಿಂದ ಅವರ ಮನಸ್ಸಿಗೆ ನೋವಾಗುತ್ತದೆ, ಅವರಿಗೆ ಆ ಹೆಸರನ್ನು ಇಡುವುದಕ್ಕೆ ಇಷ್ಟವಿಲ್ಲ ಎನ್ನುವ ಪ್ರಸಂಗ ಬಂದಾಗ ಅದನ್ನು ಕೈ ಬಿಟ್ಟಿದ್ದಾರೆ. ಕೆಲವು ಜನಗಳಿಗೆ ಕರ್ನಾಟಕ ಎನ್ನುವ ಶಬ್ದ ಟಚ್ ಆಗುತ್ತದೆ ಅಲರ್ಜಿ ಆಗುತ್ತದೆ ಎಂದು ಹೇಳಿದರು. ಮೈಸೂರಿನ ಕೆಲವು ಜನಗಳಿಗೆ ಕರ್ನಾಟಕ ಎಂದು ಹೆಸರು ಇಡುವುದಕ್ಕೆ ಇಷ್ಟವಿಲ್ಲ. ಹೈದರಾಬಾದ್ ಕರ್ನಾಟಕದ ಕೆಲವು ಜನಗಳಿಗೆ, ಮದ್ರಾಸ್ ಕರ್ನಾಟಕದಿಂದ ಬಂದಿರತಕ್ಕ ಕೆಲವು ಜನಗಳಿಗೆ, ಬೊಂಬಾಯಿ ಕರ್ನಾಟಕದಿಂದ ಬಂದಿರತಕ್ಕ ಕೆಲವು ಜನಗಳಿಗೆ ಈ ರಾಜ್ಯಕ್ಕೆ ಮೈಸೂರು ಎಂದು ಹೆಸರು ಇರುವುದು ಇಷ್ಟವಿಲ್ಲ. ಆದಕ್ಕೋಸ್ಕರ ಅದನ್ನು ಮಾರ್ಪಾಡು ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಎಂದರೆ ಈ ರಾಜ್ಯಕ್ಕೆ ಅವರು ಕರ್ನಾಟಕ ಎಂದು ಹೆಸರಿಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಕೆಲವರಿಗೆ ಮೈಸೂರು ಎಂದು ಇರುವುದಕ್ಕೆ ಇಷ್ಟವಿಲ್ಲ. ಕೆಲವರಿಗೆ ಕರ್ನಾಟಕ ಎಂದು ಹೆಸರಿಡುವುದಕ್ಕೆ ಇಷ್ಟವಿಲ್ಲ. ಆದ್ದರಿಂದ ಶ್ರೀಮಾನ್ ಶ್ರೀಕಂಠಯ್ಯನವರು ಅದೂ ಬೇಡ, ಇದೂ ಬೇಡ ಎಂದು ಮೂರನೆಯ ಮಾರ್ಗವನ್ನು ಕಂಡುಹಿಡಿದಿದ್ದಾರೆ. ಅವರು ಒಂದು ಕಾಂಪ್ರಮೈಜ್ ಫಾರ್ಮುರಾ ಹೇಳಿದ್ದಾರೆ. ಎಂದರೆ ಈ ರಾಜ್ಯದ ಹೆಸರನ್ನು 'ಕನ್ನಡನಾಡು' ಎಂದು ಕರೆಯಿರಿ ಎಂದು ಹೇಳಿದ್ದಾರೆ. ಶ್ರೀಮಾನ್ ಶ್ರೀಕಂಠಯ್ಯನವರಿಗೂ ಮನವರಿಕೆಯಾಗಿದೆ ಈ ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಡುವುದು ಬಹಳ ಅಪ್ರೊಪ್ರಿಯೇಟ್ ಆದದ್ದು, ಸಮಂಜಸವಾದುದ್ದು ಎಂದು. ಆದರೆ ಕರ್ನಾಟಕ ಎಂದು ಹೆಸರಿಡುವ ಬಗ್ಗೆ ಕೆಲವು ಜನಗಳಿಗೆ ಭಿನ್ನಾಭಿಪ್ರಾಯ ಬರುತ್ತದೆ, ಅದಕ್ಕೆ ಕೈ ಹಾಕುವುದು ಬೇಡ ಎನ್ನುವುದು ಅವರ ಅಭಿಪ್ರಾಯ ಇದ್ದಹಾಗೆ ಕಾಣುತ್ತದೆ. ನನ್ನ ದೃಷ್ಟಿಯಲ್ಲಿ ಆ ಬಗ್ಗೆ ಅಷ್ಟಾಗಿ ಭಿನ್ನಾಭಿಪ್ರಾಯ ಬೇರೂ ಇದ್ದಹಾಗೆ ಕಾಣುವುದಿಲ್ಲ. ಏಕೆಂದರೆ ಕನ್ನಡನಾಡು ಎಂದು ಕರೆಯತಕ್ಕದ್ದೂ ಎರಡು ಶಬ್ದಗಳು, ಕರ್ನಾಟಕ ಎನ್ನುವುದು ಒಂದು ಶಬ್ದ. ಇದು ಅನೂಚಾನವಾಗಿ ಬಂದಿರತಕ್ಕದ್ದು. ಈಗ ನಮ್ಮ ನೆರೆ ರಾಜ್ಯದವರು ಹಿಂದೆ ಮದ್ರಾಸ್ ಎಂದು ಕರೆಯುತ್ತಿದ್ದರು. ಅವರು ಅದನ್ನು ಬದಲಾವಣೆ ಮಾಡಬೇಕೆಂದು ಒಂದು ನಿರ್ಣಯವನ್ನು ಆ ರಾಜ್ಯದ ವಿಧಾನಸಭೆಯಲ್ಲಿ ತಂದು ಆ ರಾಜ್ಯಕ್ಕೆ 'ತಮಿಳುನಾಡು' ಎಂದು ಕರೆಯಬೇಕೆಂದು ಆ ನಿರ್ಣಯವನ್ನು ಪಾಸು ಮಾಡಿ ಈಗ

(ಶ್ರೀ ಬಿ. ಪಿ. ಗಂಗಾಧರ್)

ಮದ್ರಾಸ್ ರಾಜ್ಯದ ಹೆಸರನ್ನು 'ತಮಿಳುನಾಡು' ಎಂದು ಕರೆಯುತ್ತಿದ್ದಾರೆ; ನಮ್ಮ ನೆರೆ ರಾಜ್ಯವಾದ ತಮಿಳು ನಾಡಿನ ಭೂ ಭಾಗಕ್ಕೆ ಅವರು ತಮಿಳು ನಾಡು ಎಂದು ಹೆಸರು ಕೊಟ್ಟ ಮೇಲೆ ನಾವು ನಮ್ಮ ಭೂ ಭಾಗಕ್ಕೆ ಕನ್ನಡ ನಾಡು ಎಂದು ಏತಕ್ಕೆ ಕರೆಯಬಾರದು ಎಂದು ಶ್ರೀಮಾನ್ ಶ್ರೀಕಂಠಯ್ಯನವರ ಪ್ರಶ್ನೆ. ಬಹುಶಃ ಅವರು ಮದ್ರಾಸ್ ನಾಡು ಎಂದು ಕರೆಯುವುದಕ್ಕೆ ಆಗುತ್ತಾ ಇರಲಿಲ್ಲ, ಅದಕ್ಕೋಸ್ಕರ ಅವರು ತಮಿಳು ನಾಡು ಎಂದು ಕರೆದಿರಬಹುದು. ಆ ಭೂಭಾಗಕ್ಕೆ ಹಿಂದಿನ ಕಾಲದಲ್ಲಿ, ಪುರಾತನ ಕಾಲದಲ್ಲಿ, ಪುರಾಣಗಳ ಕಾಲದಲ್ಲಿ ಬೇರೆ ಹೆಸರು ಇದ್ದರೆ ಅದನ್ನು ಅವರು ಬಿಡುತ್ತಾ ಇರಲಿಲ್ಲ. ಅವರೂ ಸಹ ಭಾಷಾ ವಾತ್ಸಲ್ಯಕ್ಕೋಸ್ಕರ ಎಷ್ಟೋ ಎಷ್ಟೋ ಹೋರಾಟವನ್ನು ನಡೆಸಿದ್ದಾರೆ. ಮದ್ರಾಸು, ಕೇರಳ, ಹಳೆಯ ಮೈಸೂರು, ಕರ್ನಾಟಕದ ಭಾಗಗಳು ಇವೆಲ್ಲವನ್ನೂ ನೋಡಿದರೆ ಬಹುಶಃ ಹೆಸರಿನ ಬಗ್ಗೆ ಭಾಷೆಯ ಬಗ್ಗೆ ಬಹಳ ಗೊಂದಲ, ಪ್ರೀತಿ, ವಿಶ್ವಾಸವನ್ನು ತೋರಿಸಿದವರು ಮದ್ರಾಸನ್ನು ಬಿಟ್ಟರೆ ಮತ್ತೊಬ್ಬರು ಇಲ್ಲ. ಸ್ವಾತಂತ್ರ್ಯ ಬಂದ ಸ್ವಲ್ಪದಿವಸಗಳಲ್ಲೇ ಅವರು ತಮಿಳು ಜನಾಂಗದವರ ಕಾನ್‌ಫರೆನ್ಸ್ ಕರೆದು ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಅವರು ಭಾಷೆಯ ಬಗ್ಗೆ ಅವರ ಭೂ ಭಾಗದ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿದ್ದಾರೆ. ಅವರು ಬೇರೆ ಹೆಸರನ್ನು ಕರೆಯುವುದಕ್ಕೆ ಇತರ ಪುರಾಣಗಳು, ಇತಿಹಾಸಗಳು, ಇದ್ದಿದ್ದರೆ ಅದನ್ನು ಇಡುವುದಕ್ಕೆ ಅವರು ಯೋಚನೆಮಾಡದೇ ಬಿಡುತ್ತಾ ಇರಲಿಲ್ಲ. ಅವರು ಭಾಷೆಯಮೇಲೆ ಇರತಕ್ಕ ಪ್ರೀತಿ ವಾತ್ಸಲ್ಯವನ್ನು ತೋರಿಸುವುದಕ್ಕೋಸ್ಕರ ತಮಿಳು ನಾಡು ಎಂದು ಕರೆದಿದ್ದಾರೆ, ಈ ದೃಷ್ಟಿಯಿಂದ ನಮ್ಮಲ್ಲೂ ಕೂಡ ಕನ್ನಡ ನಾಡು ಎಂದು ಏತಕ್ಕೆ ಕರೆಯಬಾರದು ಎಂದು ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ್ದಾರೆ. ಅದಕ್ಕಾಗಿ ನಾನು ಹೇಳುವುದು ಇಷ್ಟೆ. ನಾವು ಹೊಸ ಹೆಸರನ್ನು ಸೃಷ್ಟಿ ಮಾಡಿ ನಮ್ಮ ರಾಜ್ಯಕ್ಕೆ ಇಡಬೇಕೆಂದೇನೂ ಇಲ್ಲ. ಹಿಂದಿನಿಂದಲೂ, ಪುರಾತನಕಾಲದಿಂದಲೂ ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರು ಇತ್ತು. ಆದ್ದರಿಂದ ನಮ್ಮ ಇತಿಹಾಸದ ಪ್ರಕಾರ ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಡುವುದು ಸೂಕ್ತವಾಗಿದೆ. ಕರ್ನಾಟಕ ಎನ್ನುವ ಹೆಸರು ಅನೇಕ ಕಡೆಗಳಲ್ಲಿ ಇದೆ. ಇತಿಹಾಸಗಳಲ್ಲಿದೆ. ಅನೇಕ ಸಂಘಗಳು ಕರ್ನಾಟಕ ಎನ್ನುವ ಹೆಸರನ್ನು ಇಟ್ಟುಕೊಂಡಿವೆ. ಅನೇಕ ವಾನು ಶಿಲ್ಪಗಳಲ್ಲಿ ಕರ್ನಾಟಕದ ಹೆಸರು ಇದೆ. ಒಟ್ಟಿನಲ್ಲಿ ಕರ್ನಾಟಕ ಎನ್ನುವ ಮಾತು ಅನೇಕ ಪುರಾಣಗಳು, ಇತಿಹಾಸಗಳು, ಮತ್ತು ಜನಜಂಗುಳಿಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಕೆಲವು ಚರಿತ್ರಕಾರರು ಹೇಳಿದಹಾಗೆ ಈ ವಿಶಾಲವಾದ ಭೂಭಾಗ ಕಪ್ಪು ಮಣ್ಣಿನಿಂದ ಕೂಡಿದಂತಹ ಭಾಗ, ಕಪ್ಪು ಮಣ್ಣಿನಿಂದ ಕೂಡಿದಂತಹ ರಾಜ್ಯ. ಕಪ್ಪು ಮಣ್ಣು ಬಹಳ ಫಲವತ್ತಾದ ಮಣ್ಣು. ಈ ಕಪ್ಪು ಮಣ್ಣಿನ ಭೂಮಿಯಲ್ಲಿ ಜೋಳವನ್ನು ಬೆಳೆಯುತ್ತಾರೆ. ಗೋಧಿಯನ್ನು ಬೆಳೆಯುತ್ತಾರೆ. ಹೀಗೆಯೇ ಹತ್ತಿ ವಗೈರೆ ಏನೇನೋ ಬೆಳೆಯುತ್ತಾರೆ. ಇದೆಲ್ಲಾ ನಮ್ಮ ಆಹಾರಶಾಖೆಯ ಮಂತ್ರಿಗಳಾದ ಶ್ರೀಮಾನ್ ಏಕಲದಾಸ್ ಶೆಟ್ಟರಿಗೆ ಗೊತ್ತಿದೆ. ಇಂಥಾ ಫಲವತ್ತಾದ ಕಪ್ಪು ಮಣ್ಣನ್ನು ಹೊಂದಿರತಕ್ಕ ಭೂಭಾಗಕ್ಕೆ 'ಕರ್ನಾಟಕ' ಕರುನಾಡು ಎಂದು ಕರೆಯುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಡುವುದರಿಂದ ಅಡ್ವಾಂಟೇಜ್ ಏನಿದೆ ಎಂಬುದು ಒಂದು ಪ್ರಶ್ನೆ.

Business of the House

Mr. SPEAKER.—The hon. Member will continue his speech next time.

Before I adjourn I have got an announcement to make. The Business Advisory Committee has taken a decision that the following Bills may be taken up for discussion on Monday the 31st March 1969.

1. The Mysore Courts of Civil Judges (Validation of Proceedings) Bill, 1967.